ಓ ಎಸ್ ನಂ.118/2024

ಪಿ.ಡಬ್ಲ್ಯೂ-1 ಬಸವರಾಜ ತಂದೆ ಸಿದ್ದಪ್ಪ ಬಿರಾದಾರ

(ಇಂದು ದಿನಾಂಕಃ **30-07-2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)

ಮುಂದುವರೆದ ಪಾಟೀ ಸವಾಲುಃ ಶ್ರೀ ಎಸ್ ಕೆ ಪಿ ವಕೀಲರಿಂದ.

ದಾವಾ ಆಸ್ತಿ ಸರ್ವೆ ನಂಬರ ೩೪೪/೩ ರ ಜಮೀನು ೨ ಬಾರಿ ಏಕೆ ತೋರಿಸಿರುತ್ತೀರಿ ಎಂದರೆ ಸಾಕ್ಷಿಯು ೨ನೇ ಪ್ರತಿವಾದಿಯ ಹೆಸರಿನಲ್ಲಿ ೫ ಎಕರೆ ಮತ್ತು ೩ನೇ ಪ್ರತಿವಾದಿಯ ಹೆಸರಿನಲ್ಲಿ ೫ ಎಕರೆ ಜಮೀನು ಇರುವುದರಿಂದ ಆ ರೀತಿ ತೋರಿಸಿರುತ್ತೇವೆ ಎನ್ನುತ್ತಾರೆ. ದಾವಾ ಜಮೀನುಗಳ ಚೆಕ್ಕುಬಂದಿ ನನಗೆ ಗೊತ್ತಿರದ ಕಾರಣ ನಾನು ಅವುಗಳನ್ನು ತೋರಿಸಿರುವುದಿಲ್ಲ. ದಾವಾ ಮನೆಯ ಚೆಕ್ಕುಬಂದಿ ನನಗೆ ಗೊತ್ತಿರುತ್ತದೆ. ನಾನು ದಾವೆಯಲ್ಲಿ ಮನೆಯ ಚೆಕ್ಕುಬಂದಿ ನಮೂದಿಸಿಲ್ಲ ಎಂದರೆ ಸರಿ. ನಮ್ಮ ತಂದೆ ಸಿದ್ದಪ್ಪರವರು ಜೀವಿತಾ ಇದ್ದಾಗ ನನ್ನ ಹೆಸರಿನಲ್ಲಿ ಕೆಲವು ಜಮೀನುಗಳು ಮತ್ತು ೨ನೇ ಪ್ರತಿವಾದಿ ಶಂಕರಲಿಂಗನ ಹೆಸರಿನಲ್ಲಿ ಸ್ವಲ್ಪ ಜಮೀನು ಮಾಡಿರುತ್ತಾರೆ ಎಂದರೆ ಸರಿ.

೨. ಪ್ರತಿವಾದಿಗಳು ಯಾವ ಜಮೀನನ್ನು ಮತ್ತು ಯಾವ ಸರ್ವೆ ನಂಬರ ಮತ್ತು ಎಷ್ಟು ಜಮೀನನ್ನು ಕಾನೂನುಬಾಹಿರವಾಗಿ ಮಾಡಿಕೊಂಡಿರುತ್ತಾರೆ ಎಂದು ನನ್ನ ದಾವೆಯಲ್ಲಿ ಬರೆದಿರುವುದಿಲ್ಲ ಎಂದರೆ ಸರಿ. ೧೯೯೦ ರಲ್ಲಿ ನಾನು ಪಾಲು ಕೇಳಿದ ಮೇರೆಗೆ ನಮ್ಮ ತಂದೆ ಆಸ್ತಿ ನನ್ನ ಹೆಸರಿನಲ್ಲಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸರ್ವೆ ನಂಬರ ೩೭೫/೪ ಕಡಗಂಚಿಯಲ್ಲಿರುವ ಜಮೀನಿನಲ್ಲಿ ಪಾಲು ಮಾಡಬೇಕು ಎಂದು ನಾನು ದಾವೆಯಲ್ಲಿ ಕೇಳಿರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿಗಳಲ್ಲಿ ನನಗೆ ನೀಡಿದ ಸರ್ವೆ ನಂಬರ ೩೭೫/೪ ರ ಜಮೀನು ನಮ್ಮ ಹಿರಿಯರಿಂದ ಬಂದಿರುತ್ತದೆ. ಉಳಿದ ಆಸ್ತಿಗಳು ನಮ್ಮ ತಂದೆ ಗಳಿಸಿದ

ಆಸ್ತಿಗಳಾಗಿರುತ್ತವೆ. ನನ್ನ ಅಜ್ಜನ ಹೆಸರು ಯಶವಂತರಾವ್ ಆಗಿರುತ್ತದೆ. ನನ್ನ ಅಜ್ಜ ಯಶವಂತರಾವ್ ರವರ ಹೆಸರಿನಲ್ಲಿ ಸರ್ವೆ ನಂಬರ ೩೭೫/೪ ರ ಜಮೀನು ಇದ್ದ ಕುರಿತು ನಾನು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಸದರಿ ಜಮೀನೂ ಕೂಡಾ ನಾನು ಹೇಳಿದಂತೆ ಹಿರಿಯರಿಂದ ಬಂದಿರುವುದಿಲ್ಲ, ಅದೂ ಕೂಡಾ ನಮ್ಮ ತಂದೆ ಗಳಿಸಿದ್ದು, ಅವರಿಂದ ನಮಗೆ ಬಂದಿರುತ್ತದೆ ಎಂದರೆ ಸರಿ. ನಮ್ಮ ತಂದೆ ದಿನಾಂಕ 13-04-2017 ರಂದು ಮೃತರಾಗಿರುತ್ತಾರೆ.

೩. ೧ನೇ ಪ್ರತಿವಾದಿಯ ಜಮೀನನ್ನು ತಮ್ಮ ಹೆಸರಿನಲ್ಲಿ ಮಾಡಿಕೊಂಡಿರುತ್ತಾರೆ. ಅವರಿಗೆ ಯಾರು ಜಮೀನು ಹಸ್ತಾಂತರ ಮಾಡಿಕೊಟ್ಟಿರುವುದಿಲ್ಲ. ೧ನೇ ಪ್ರತಿವಾದಿ ಬಾಗಮ್ಮರವರು ಜೀವಿತಾ ಇರುತ್ತಾರೆ. ನಮ್ಮ ತಂದೆ ಮೃತರಾದ ನಂತರ ೧ನೇ ಪ್ರತಿವಾದಿ ಬಾಗಮ್ಮರವರು ಹಕ್ಕು ಇರುತ್ತದೆ ಎಂದರೆ ಸಾಕ್ಷಿಯು ಅವರಿಗೆ ಇರುವುದಿಲ್ಲ ಏಕೆಂದರೆ ನಮ್ಮ ತಾಯಿ ಮೊದಲನೆಯ ಹೆಂಡತಿ ಆಗಿರುತ್ತಾರೆ ಎನ್ನುತ್ತಾರೆ. ನಮ್ಮ ತಂದೆ-ತಾಯಿಯ ಮದುವೆ ಯಾವ ವರ್ಷ ಆಗಿದೆ ಎಂದು ನನಗೆ ಗೊತ್ತಿಲ್ಲ. ೧ನೇ ಪ್ರತಿವಾದಿ ನಮ್ಮ ತಂದೆಯ ಜೊತೆಗೆ ಯಾವ ವರ್ಷ ಮದುವೆ ಆಗಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಮ್ಮ ತಂದೆ ಮೃತರಾದ ನಂತರ ಪ್ರತಿ ವರ್ಷ ನಾನು ನಮ್ಮ ಊರಿಗೆ ಹೋಗುತ್ತಿದ್ದೆ. ಸರ್ವೆ ನಂಬರ ೯೭ ಮತ್ತು ಸರ್ವೆ ನಂಬರ ೩೪೪ ರ ಜಮೀನುಗಳನ್ನು ನನ್ನ ತಂಗಿಯರ ಮದುವೆ ಮಾಡಲು ಇಡಲಾಗಿತ್ತು ಎಂದರೆ ಸರಿ.

೪. ೧೯೯೦ ರಲ್ಲಿ ನನಗೆ ಪಾಲು ನೀಡಿದ ನಂತರ ನಾನು ನಮ್ಮ ತಂದೆಯವರನ್ನು ಮತ್ತೆ ಪಾಲು ಕೇಳಿರುವುದಿಲ್ಲ. ಸಾಕ್ಷಿಯು ನಮ್ಮ ತಂದೆ ಉಳಿದಂತಹ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ ಎನ್ನುತ್ತಾರೆ. ನಮ್ಮ ತಂದೆ ಉಳಿದ ಆಸ್ತಿಯನ್ನು ಮಾರಾಟ ಮಾಡಿದ ಬಗ್ಗೆ

ತೋರಿಸಲು ಖರೀದಿ ಪತ್ರಗಳು ಇರುತ್ತವೆ, ನಾನು ಅವುಗಳನ್ನು ಹಾಜರುಪಡಿಸಿರುವುದಿಲ್ಲ. ಲಕ್ಷ್ಮಣ ಪೂಜಾರಿ ಮತ್ತು ಉಮಾಬಾಯಿ ಗಂಡ ಜಗನ್ನಾಥ ಬಿರಾದಾರ ಮತ್ತು ಶರಣಬಸಪ್ಪ ಬಿರಾದಾರರವರಿಗೆ ಜಮೀನು ನಮ್ಮ ತಂದೆ ಮಾರಾಟ ಮಾಡಿರುತ್ತಾರೆ. ಸದರಿ ವಿಚಾರಗಳನ್ನು ನನ್ನ ದಾವೆಯಲ್ಲಿ ನಾನು ತಿಳಿಸಿರುವುದಿಲ್ಲ. ೧೯೯೦ ರಲ್ಲಿ ನನಗೆ ಪಾಲು ಮಾಡಿಕೊಟ್ಟ ನಂತರ ನಮ್ಮ ತಂದೆ ಬೇರೆ ಹೆಂಡತಿ ಮತ್ತು ಮಕ್ಕಳ ಹೆಸರಿನಲ್ಲಿ ಯಾವುದೇ ಆಸ್ತಿ ಹಸ್ತಾಂತರ ಮಾಡಿರುವುದಿಲ್ಲ. ನಮ್ಮ ತಾಯಿಯ ಹೆಸರು ಪಾರ್ವತಿ ಆಗಿರುತ್ತದೆ. ನನ್ನ ತಾಯಿ ಪಾರ್ವತಿರವರು ನಾನು ೨-೩ ವರ್ಷದ ಮಗು ಇದ್ದಾಗ ನನ್ನನ್ನು ಕರೆದುಕೊಂಡು ಹುಬ್ಬಳ್ಳಿಗೆ ಹೋಗಿದ್ದರು ಎಂದರೆ ಸರಿ. ಸಾಕ್ಷಿಯು ನಮ್ಮ ತಂದೆ ನಮ್ಮನ್ನು ಹೊರ ಹಾಕಿದ್ದರು ಎನ್ನುತ್ತಾರೆ. ನಮ್ಮ ತಾಯಿ ಆ ನಂತರ ನಮ್ಮ ತಂದೆಯ ಹತ್ತಿರ ಯಾವತ್ತು ಬಂದಿಲ್ಲ ಎಂದರೆ ಸರಿಯಲ್ಲ. ವರ್ಷಕ್ಕೊಮ್ಮೆ ನಮ್ಮ ತಾಯಿ ನಮ್ಮ ತಂದೆಯ ಹತ್ತಿರ ಬರುತ್ತಿದ್ದರು.

೫. ನನ್ನ ಮುಖ್ಯ ವಿಚಾರಣೆಯಲ್ಲಿ ಏನು ಬರೆದಿದೆ ಎಂದು ನನಗೆ ಗಮನಕ್ಕೆ ಇಲ್ಲ. ೧೯೯೦ ರಲ್ಲಿ ಈಗಾಗಲೆ ಪಾಲು ಆಗಿ ನಾನು ನನ್ನ ಪಾಲಿನ ಆಸ್ತಿಯನ್ನು ತೆಗೆದುಕೊಂಡಿದ್ದರೂ ಸಹ ಈಗ ಪ್ರತಿವಾದಿಗಳ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಒಂದು ಸುಳ್ಳು ದಾವೆಯನ್ನು ಹಾಕಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.